**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ**

**<u>ಸಿ.ಸಿ ನಂ. 871/2013</u>**

ದಿನಾಂಕಃ. **24.02.2026.** ರಂದು ಸಾಕ್ಷಿಗೆ ಮದ್ಯಾಹ್ನ **12.20** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

ಚಾಸಾ-**10** ಪ್ರಾಸಾ-**9**

| | |
|---|---|
| ಹೆಸರು | - ಧನಂಜಯ |
| ತಂದೆ ಹೆಸರು | - ವೀರಣ್ಣ |
| ವಯಸ್ಸು | - **61** |
| ಉದ್ಯೋಗ | - ನಿವೃತ್ತ ಪೋಲಿಸ್ ಅಧೀಕ್ಷಕರು |
| ವಿಳಾಸ | - ಬೆಂಗಳೂರು |

**<u>ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-</u>**

ನಾನು ಜೂನ್ **2011** ರಿಂದ ಅಕ್ಟೋಬರ್ **2013** ರವರೆಗೆ ಕನಕಪುರ ವೃತ್ತ ನಿರೀಕ್ಷಕನಾಗಿ ಕೆಲಸ ನಿರ್ವಹಿಸಿದ್ದೇನೆ.

ದಿನಾಂಕಃ **17.03.2013** ರಂದು ಈ ಪ್ರಕರಣದ ಬಗ್ಗೆ ಗೊತ್ತಾದ ನಂತರ ಸಾತನೂರು ಪೋಲಿಸ್ ಠಾಣೆಗೆ ಭೇಟಿ ಕೊಟ್ಟು ಚಾ.ಸಾ. **9** ರವರಿಂದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ಚಾ.ಸಾ. **1** ರವರ ಹೇಳಿಕೆಯನ್ನು ಪಡೆದುಕೊಂಡೆ.

ಅದೇ ದಿನ ಚಾ.ಸಾ. **1** ರವರು ಅವರ ಸಮವಸ್ತ್ರವನ್ನು ಹಾಜರುಪಡಿಸಿದ್ದು ಅದನ್ನು ಪಂಚರ ಸಮಕ್ಷಮ ಸಂಜೆ **3.45** ರಿಂದ **4.30** ಗಂಟೆವರೆಗೆ ಪಂಚನಾಮ ಮಾಡಿ ಅಮಾನತ್ತುಪಡಿಸಿಕೊಂಡೆ. ಸದರಿ ಮುದ್ದೆಮಾಲಿನ ಬಗ್ಗೆ ಪಿ.ಎಫ್. ನಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿದೆ.

ಅಮಾನತ್ತುಪಡಿಸಿಕೊಂಡ ಒಂದು ಸಮವಸ್ತ್ರವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಒಂದು

ಸಮವಸ್ತ್ರವನ್ನು ನೋಡಿ ಸದರಿ ಸಮವಸ್ತ್ರ ಎಂದು ಗುರುತಿಸಿದ್ದು ಅದನ್ನು ಈಗಾಗಲೇ ಎಂಓ 1 ಎಂದು ಗುರುತಿಸಲಾಗಿದೆ.

ಸಾಕ್ಷಿ ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ಪಂಚನಾಮೆ ಎಂದು ಗುರುತಿಸಿದ್ದು, ಸದರಿ **ಪಂಚನಾಮೆಯನ್ನು** ಈಗಾಗಲೇ ನಿಪಿ-4 ಎಂದು, ಸಾಕ್ಷಿ ಸಹಿಯನ್ನು ನಿಪಿ-4(ಡಿ) ಎಂದು ಗುರುತಿಸಲಾಯಿತು.

ಅದೇ ದಿನ ನಾನು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಪಂಚರಾದ ಚಾ.ಸಾ. 4 ಮತ್ತು 5 ರವರ ಸಮಕ್ಷಮ ಸಂಜೆ 4 ಗಂಟೆ ಯಿಂದ 4.45 ಗಂಟೆವರೆಗೆ ಕೃತ್ಯ ನಡೆ ಸ್ಥಳದ ಪಂಚನಾಮೆ ಮಾಡಿದೆ.

ಸಾಕ್ಷಿ ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ಪಂಚನಾಮೆ ಎಂದು ಗುರುತಿಸಿದ್ದು, ಸದರಿ **ಪಂಚನಾಮೆಯನ್ನು** ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ನಂತರ ಸಾಕ್ಷಿದಾರರಾದ ಚಾ.ಸಾ 2 ರಿಂದ 5 ರವರ ಹೇಳಿಕೆಗಳನ್ನು ಪಡೆದುಕೊಂಡೆ. ನಂತರ ಆರೋಪಿತರ ಪತ್ತೆಗಾಗಿ ಸಿಬ್ಬಂದಿಯವರನ್ನು ನೇಮಿಸಿದೆ.

ನಂತರ ದಿನಾಂಕಃ 17.04.2013 ರಂದು ಈ ಪ್ರಕರಣದ 1 ಮತ್ತು 2 ನೇ ಆರೋಪಿತರು ಮಾನ್ಯ ಉಚ್ಚ,ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೆಪಿೂಂಡು ನನ್ನ ಮುಂದೆ ಹಾಜರಾದರು. ನ್ಯಾಯಾಲಯದ ನಿರ್ದೇಶನದಂತೆ ಅವರನ್ನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ

ಮಾಡಿದೆ.  ಅದೇ ದಿನ ಚಾ.ಸಾ. 2 ರಿಂದ 5 ರವರ ಮರುಹೇಳಿಕೆಗಳನ್ನು ಪಡೆದುಕೊಂಡೆ.

ದಿನಾಂಕಃ 22.04.2013 ರಂದು ಕೃತ್ಯ ನಡೆದ ದಿನದ ಕರ್ತವ್ಯದ ಬಗ್ಗೆ ನೇಮಿಸಿದ ಬಗ್ಗೆ ಠಾಣಾ ಪುಸ್ತಕದಿಂದ ದಾಖಲೆಯನ್ನು ಪಡೆದುಕೊಂಡೆ.

ಸಾಕ್ಷಿ  ಒಂದು ದಾಖಲೆಯನ್ನು ನೋಡಿ ಅದರಲ್ಲಿರುವ  ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ದಾಖಲೆ  ಎಂದು ಗುರುತಿಸಿದ್ದು, ಸದರಿ **ದಾಖಲೆಯನ್ನು** ನಿಪಿ-7 ಎಂದು, ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ದಿನಾಂಕಃ 21.05.2013 ರಂದು ಕನಕಪುರ ಸಾರ್ವಜನಿಕ ಆಸ್ಪ್ರತೆಯಿಂದ ಚಾ,ಸಾ. 1 ರವರ ಗಾಯದ  ಪ್ರಮಾಣಪತ್ರವನುಕ್ನಿ ಹಾಜರುಪಡಿಸಿದ್ದು ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆ.

ಸಾಕ್ಷಿ ಗಾಯದ ಪ್ರಮಾಣಪತ್ರವನ್ನು  ನೋಡಿ ಅದರಲ್ಲಿರುವ  ಸಹಿಗಳನ್ನು ನೋಡಿ ತನ್ನ ಸಹಿ ಮತ್ತು ಸದರಿ ಗಾಯ ಪ್ರಮಾಣ ಪತ್ರ   ಎಂದು ಗುರುತಿಸಿದ್ದು, ಸದರಿ **ಗಾಯದ ಪ್ರಮಾಣಪತ್ರವನ್ನು ಈಗಾಗಲೇ**  ನಿಪಿ-5 ಎಂದು, ಸಾಕ್ಷಿ ಸಹಿಗಳನ್ನು  ನಿ.ಪಿ.5 (ಬಿ)  ಎಂದು ಗುರುತಿಸಲಾಯಿತು.

ಗೈರು ಹಾಜರಿರುವ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ.

ಅದೇ ದಿನ ತನಿಖೆಯನ್ನು ಮುಕ್ತಾಯಗೊಳಿಸಿ ಆರೋಪಿತರ ವಿರುದ್ಧ ಆರೋಪ ಸಾಬೀತಾಗಿದ್ದರಿಂದ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದೆ.

**ಪಾಟೀ ಸವಾಲು: ಆರೋಪಿ ಪರ ಪಿ.ಎಸ್.ಆರ್. ವಕೀಲರಿಂದಃ**

ನಾನು ದಿನಾಂಕಃ 17.03.2013 ರಂದು ಸಾತನೂರು ಪೋಲಿಸ್ ಠಾಣೆ ಗೆ ಭೇಟಿ ಕೊಟ್ಟು ಮೊದಲು ಪಂಚನಾಮೆ ಮಾಡಿ ನಂತರ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡೆ. ನಾನು ಚಾ.ಸಾ. 1 ರವರನ್ನು ವಿಚಾರಣೆ ಮಾಡಿದಾಗ ಅವರಿಗೆ ಗಾಯಗಳಾಗಿರಲಿಲ್ಲ ಸಾಕ್ಷಿ ಮುಂದುವರೆದು ತಳ್ಳಾಟ ನೂಕಾಟದಿಂದ ಮತ್ತು ಕಪಾಳಕ್ಕೆ ಹೊಡೆದಿದ್ದರಿಂದ Abrasion ಆಗಿತ್ತು. ಚಾ.ಸಾ, 1 ರವರಿಗೆ ಚಿಕಿತ್ಸೆ ಪಡೆದುಕೊಳ್ಳಿ ಎಂದು ಮೌಖಿಕವಾಗಿ ಹೇಳಿದ್ದೆ ಲಿಖಿತವಾಗಿ ಹೇಳಿಲ್ಲ. ಚಾ.ಸಾ, 1 ರವರನ್ನು ನಾನು ವಿಚಾರಣೆ ಮಾಡಿದಾಗ ಅವರು ಸಮವಸ್ತ್ರದಲ್ಲಿ ಇರಲಿಲ್ಲ. ನಾನು ಸಾತನೂರು ಠಾಣೆಯನ್ನು ಭೇಟಿ ಕೊಡುವ ಮೊದಲು ಚಾ.ಸಾ. 1 ರವರು ಕಬ್ಬಾಳುವಿನಲ್ಲಿ ಗಲಾಟೆಯಾದ ಬಗ್ಗೆ ಮಾಹಿತಿಯನ್ನು ಕೊಟ್ಟಿರಲಿಲ್ಲ. ಚಾ.ಸಾ. 9 ರವರು ನನಗೆ ದೂರವಾಣಿ ಮುಖಾಂತರ ಮಾಹಿತಿ ತಿಳಿಸಿದ್ದರು.

ಯಾವುದೇ ಗಲಾಟೆಯಾದಾಗ ಠಾಣಾಧಿಕಾರಿ ತಕ್ಷಣ ಹಿರಿಯ ಅಧಿಕಾರಿಗೆ ಮಾಹಿತಿ ಕೊಡುತ್ತಾರೆ ಎಂದರೆ ಸರಿ. ಗಲಾಟೆಯಾದ ಮಾಹಿತಿ ಬಂದ ನಂತರ ಕಬ್ಬಾಳುವಿಗೆ ಬಂದೋಬಸ್ತ ಸಲುವಾಗಿ ಸಿಬ್ಬಂದಿಯನ್ನು ನಾನು ಕಳುಹಿಸಿರುವುದಿಲ್ಲ. ಚಾ.ಸಾ. 1 ರವರು ಅವರ ಸಮವಸ್ತ್ರದ ಗುಂಡಿ ಮತ್ತು ಬಲಭುಜದ ಮೇಲಿರುವ ಪಟ್ಟಿ ಕಿತ್ತುಹೋದ ಬಗ್ಗೆ ಮಾಹಿತಿ ಕೊಟ್ಟಿರುವುದಿಲ್ಲ ಸಾಕ್ಷಿ ಮುಂದುವರೆದು ಸಮವಸ್ತ್ರುವನ್ನು ಅಮಾನತ್ತುಪಡಿಸಿಕೊಳ್ಳುವಾಗ ಚಾ.ಸಾ. 1 ರವರು ಕಿತ್ತುಹೋದ ಗುಂಡಿ , ಪಟ್ಟಿ ಮತ್ತು ಬಲಗಡೆಯ ಜೇಬು ಕಿತ್ತುಹೋದ ಬಗ್ಗೆ ತೋರಿಸಿದ್ದರು. ಚಾ.ಸಾ. 1 ರವರನ್ನು ನಾನು ವಿಚಾರಣೆ ಮಾಡಿದಾಗ ಅವರ ಕೈಯಲ್ಲಿದ್ದ ಸಮವಸ್ತ್ರವನ್ನು ನನ್ನ ಮುಂದೆ ಹಾಜರುಪಡಿಸಿದ್ದರು. ಆರೋಪಿತರು ಚಾ.ಸಾ. 1 ರವರ ಮೇಲೆ ಹಲ್ಲೆ ಮಾಡಿರುವುದಿಲ್ಲ ಮತ್ತು ಸವ ುವಸ್ತ್ರವನ್ನು ಹರಿದು ಹಾಕಿರುವುದಿಲ್ಲ ಆದರೂ ಪ್ರಕರಣಕ್ಕೆ ಅನುಕೂಲವಾಗಲೆಂದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಸಮಕ್ಷಮ ಸಮವಸ್ತ್ರುವನ್ನು 4 ರ ಪ್ರಕಾರ

ಅಮಾನತ್ತುಪಡಿಸಿಕೊಂಡಿರುವುದಿಲ್ಲ ಮತ್ತು ಸಾಕ್ಷಿದಾರರು ಅಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ.

ನಿ.ಪಿ. 4 ಮತ್ತು ನಿ.ಪಿ.1 ಅನ್ನು ಪಂಚನಾಮೆಯನ್ನು ಒಂದಾದ ನಂತರ ಬಂದು ಮಾಡಿದ್ದೇನೆ, ನಿ.ಪಿ.1 ರಲ್ಲಿ ಕೈ ಬರಹದ ತಪ್ಪಿನಿಂದ ಸಮಯ ತಪ್ಪಾಗಿ ನಮೂದಾಗಿದೆ. ಸಮಯ ತಪ್ಪಾಗಿ ನಮೂದಾದ ಬಗ್ಗೆ ದೋಷಾರೋಪಣಾ ಪಟ್ಟಿಯಲ್ಲಿ ನಾನು ಹೇಳಿರುವುದಿಲ್ಲ. ಕಬ್ಬಾಳುವಿನಲ್ಲಿರುವ ಬೇಕರಿಯ ಮಾಲೀಕರು ಯಾರು ಎಂದು ದಾಖಲೆ ಪಡೆದುಕೊಳ್ಳಲಿಲ್ಲ ಸಾಕ್ಷಿ ಮುಂದುವರೆದು 2 ನೇ ಆರೋಪಿಯೇ ಅದರ ಮಾಲೀಕ. ಚಾ.ೃಸಾ. 1 ಮತ್ತು ಸಾಕ್ಷಿದಾರರ ಹೇಳಿಕೆಯ ಮೇರೆಗೆ ನಾನು 2 ನೇ ಆರೋಪಿ ಸದರಿ ಬೇಕರಿಯ ಮಾಲೀಕ ಎಂದು ಹೇಳಿದ್ದು ಯಾವುದೇ ದಾಖಲೆ ಇರುವುದಿಲ್ಲ.

ನಾನು ಘಟನಾ ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ ಮತ್ತು ಅಲ್ಲಿ ನಿ.ಪಿ.1 ರ ಪ್ರಕಾರ ಪಂಚನಾಮೆ , ಸಾಕ್ಷಿದಾರರಾದ ಚಾ,ಸಾ. 4 ಮತ್ತು 5 ರವರ ಸಮಕ್ಷಮ ಮಾಡಿರುವುದಿಲ್ಲ ಆದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ಕಬ್ಬಾಳು ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿದೆ ಎಂದರೆ ಸರಿ. ಪ್ರತಿದಿನ ಅಲ್ಲಿ ಸಾವಿರಾರು ಜನರು ಭಕ್ತರು ಹೋಗುತ್ತಾರೆ ಎಂದರೆ ಸರಿಯಲ್ಲ. ಭಕ್ತರು ಸದರಿ ದೇವಸ್ಥಾನಕ್ಕೆ ಭೇಟಿ ಕೊಡುತ್ತಾರೆ ಸಾಕ್ಷಿ ಮುಂದುವರೆದು ವಾರದಲ್ಲಿ 2 ದಿನ ಅಂದರೆ ಭಾನುವಾರ ಮತ್ತು ಮಂಗಳವಾರ ಜನ ದಟ್ಟಣೆ ಇರುತ್ತದೆ. ಜನ ದಟ್ಟಣೆ ಸಲುವಾಗಿ ದೇವಸ್ಥಾನದಲ್ಲಿ ಸಿಸಿಟಿವಿ ಅಳವಡಿಸಲಾಗಿತ್ತು ಎಂದರೆ ನನಗೆ ನೆನಪಿಲ್ಲ. ಸಿಸಿಟಿವಿ ಬಗ್ಗೆ ನಾನು ಪರಿಶೀಲನೆ ಮಾಡಿಲ್ಲ. ಸಾಕ್ಷಿ ಮುಂದುವರೆದು ಗಲಾಟೆ ಒಳಗಡೆ ಆಗಿರುವುದಿಲ್ಲ ಹೊರಗಡೆ ಆಗಿರುತ್ತದೆ. ಸಿಸಿಟಿವಿ ಒಳಗಡೆ ಹಾಕಿದ್ದರು ಹೊರಗಡೆ ಹಾಕಿಲ್ಲ. ಹೊರಗಡೆಯೂ ಸಹ ಸಿಸಿಟಿವಿ ಹಾಕಿದ್ದರು ಎಂದರೆ ಸರಿಯಲ್ಲ.

ದೇವಸ್ಥಾನ ನೋಡಿಕೊಳ್ಳಲು ಒಬ್ಬ ಆಡಳಿತಾಧಿಕಾರಿ ಇರುತ್ತಾರೆ ಎಂದರೆ ಸರಿ. ಅವರನ್ನು ಈ ಘಟನೆ ಯ ಬಗ್ಗೆ ನಾನು ವಿಚಾರಣೆ ಮಾಡಿಲ್ಲ. ನಾನು ಹೇಳುವ ಹಾಗೆ ಯಾವುದೇ ಘಟನೆ ನಡೆದಿರುವುದಿಲ್ಲ ಮತ್ತು ಚಾ.ಸಾ. 1 ರವರಿಗೆ ಸಹಾಯ ಮಾಡಲು ಯಾವುದೇ ಹೇಳಿಕೆಗಳನ್ನು ಪಡೆದುಕೊಳ್ಳದಿದ್ದರೂ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಮದ್ಯಾಹ್ನ **12.55** ಗಂಟೆವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**3** ನೇ ಅಪರ ಸಿವಿಲ್. ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಕನಕಪುರ